VIJAYAKUMAR KANNUR
Digitally signed by VIJAYAKUMAR KANNUR
Date: 2025.08.13 10:58:46 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 12.08.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ಎ ಮತ್ತು 1 ಬಿ ಪರ ಶ್ರೀ ಬಿ ಹೆಚ್ ಆರ್ ವಕೀಲರಿಂದ :**

ಅಸಲು ದಾವಾ ನಂ. 27/1998 ರಲ್ಲಿ ವಾದಿಯಾದ ಮಲ್ಲುಬಾಯಿ ಯಾವ ಪರಿಹಾರ ಕೋರಿ ದಾವೆ ದಾಖಲು ಮಾಡಿರುವರು ಎಂದು ನನಗೆ ಹೇಳಲು ಆಗುವುದಿಲ್ಲ, ಆದರೆ ಆ ದಾವೆ ಡಿಕ್ರಿ ಆಗಿರುವುದು. ಅಸಲು ದಾವಾ ನಂ. 27/1998 ರ ದಾವೆ ಯಾರ ವಿರುದ್ದ ಮಲ್ಲುಬಾಯಿ ದಾಖಲು ಮಾಡಿದ್ದಳು ಎಂದು ನನಗೆ ಗೊತ್ತಿರುವುದಿಲ್ಲ. ಮೃತ ಸೋನುಬಾಯಿ ಗಂಡ ರುಕ್ಮಾಜಿ ಶೇರಖಾನೆ ಇವಳು ದರ್ಮಾಜಿ ಹೆಸರಿನಲ್ಲಿ ಒಟ್ಟು ಮುಕ್ತ್ಯಾರ ನಾಮ ಪತ್ರವನ್ನು ಬರೆದುಕೊಟ್ಟ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಆಸ್ತಿ ವಾದಿಗೆ ಹೇಗೆ ಬಂದಿರುವುದು ಎಂದು ಸಹ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯು 3 ಗುಂಟೆಯ ವಿಸ್ತೀರ್ಣದ ಆಸ್ತಿ ಇರುವುದು.

2. ಈ ದಾವೆಯಲ್ಲಿ ಹಾಜರು ಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ 3 ರ ದಾಖಲೆಯ ಹಕ್ಕು ಬದಲಾವಣೆಯ ಆದೇಶವನ್ನು ನಿಪಿ 4 ರ ಆದೇಶದ ಪ್ರಕಾರ ರುದ್ದು ಮಾಡಿರುವರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ದಾವಾ ಆಸ್ತಿಯಲ್ಲಿ ವಾದಿಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. WP No. 65740/2010 ಪ್ರಕರಣದಲ್ಲಿ ಮಲ್ಲುಬಾಯಿ ಪಕ್ಷಗಾರರಳು ಆಗಿರುವುದಿಲ್ಲ ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ಈ ರಿಟ್ ಅರ್ಜಿಯಲ್ಲಿ ನೀಲಾಬಾಯಿ ಎಂಬುವವರು ದಾಖಲು ಮಾಡಿದ್ದರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ನೀಲಾಬಾಯಿ ಯಾವುದೇ ಆಸ್ತಿಗೆ

ಸಂಬಂಧಪಟ್ಟಿರುವುದಿಲ್ಲ. ಈ ರಿಟ್ ಅರ್ಜಿಯ ಆದೇಶದ ಮೇರೆಗೆ ADLR Mudhol ಮತ್ತು ಮಾನ್ಯ ಜಿಲ್ಯಾಧಿಕಾರಿಗಳ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದು , ಅವುಗಳಿಗೆ ಮಲ್ಲುಬಾಯಿ ಪಕ್ಷಗಾರಳು ಆಗಿರುವುದಿಲ್ಲ ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ಮಾನ್ಯ ಜಿಲ್ಲಾಧಿಕಾರಿ ಬಾಗಲಕೋಟ ಇವರು ಆ ಮೇಲ್ಮನವಿಯನ್ನು ಪುರಸ್ಕರಿಸಿ ರೀಸರ್ವೇ ಮಾಡಲು ಆದೇಶ ಮಾಡಿರುವರು ಎಂದರೆ ಸಾಕ್ಷಿಯು ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. ಆ ಸರ್ವೇ ಯಲ್ಲಿ ಮಲ್ಲುಬಾಯಿಗೆ ಸಂಬಂದಪಟ್ಟಂತೆ 3 ಗುಂಟೆ ಜಮೀನನ್ನು ಎಲ್ಲಿಯೂ ಕಾಣಿಸಿರುವುದಿಲ್ಲ ಎಂದರೆ ಸಾಕ್ಷಿಯು ಅವಳಿಗೆ 3 ಗುಂಟೆ ಆಸ್ತಿಯೂ ಬರಲೇ ಬೇಕು ಎಂದು ಉತ್ತರಿಸುವರು. ನಿಪಿ 3 ರ ದಾಖಲೆಯ ಆದೇಶವನ್ನು ರದ್ದು ಪಡಿಸಿದ ಬಗ್ಗೆ ಮತ್ತು ರೀಸರ್ವೇ ಮಾಡಿದ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿ ವಾದಿಯ ಕಬ್ಜೆಯಲ್ಲಿ ಇರುವುದಿಲ್ಲ ಹಾಗೂ ಅದು ವಾದಿಗೆ ಸಂಬಂದಪಟ್ಟಿರುವುದಿಲ್ಲ, ಆ ಕಾರಣಕ್ಕೆ ರೀಸರ್ವೇ ಮಾಡಿದಾಗ ವಾದಿಯ ಹೆಸರಿನ್ನು ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ವೈಯಕ್ತಿವಾಗಿ ಮಾಹಿತಿ ಇರುವುದಿಲ್ಲ , ಆದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 2 ಮತ್ತು 3 ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುವರು.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.08.13 10:58:52 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ